# ಜೈ ಗುರುದೇವ

## ಅಧ್ಯಾಯ ೧ – ಗುರುದೇವನ ಜನನ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಬಡಕುಟುಂಬದಲ್ಲಿ ಆಧ್ಯಾತ್ಮಿಕ ಸಿರಿ

೧೪೫.ದಿನದಿನಕೆ ಮಗುವು ವರ್ಧಿಸಲು ಮನೆಯೊಳಗೆ ।
ಹಣದ ಕೊರತೆಯ ಸ್ಥಿತಿ ಸುಧಾರಿಸಲು ಕೊನೆಗೆ ॥

೧೪೬.ಆಸ್ತಿಕನು ಖುದಿರಾಮನಾದರೂ ಅವಗೆ ।
ಆಸ್ತಿಪಾಸ್ತಿಗಳಿಲ್ಲವಾ ಗ್ರಾಮದೊಳಗೆ ॥

೧೪೭.ಏಳು ಗುಂಟೆಯ ಹೊಲವು ಆ ಲಕ್ಷ್ಮೀಜಲವು ।
ಬಾಳುವೆಗೆ ಆಧಾರವಾಗಿ ಸಲಹುವುದು ॥

೧೪೮.ಅಲ್ಲಿ ಬಿತ್ತುವ ಭತ್ತವೆಷ್ಟೆಂದು ಗೊತ್ತೆ ।
ಮೂರು ಮುಷ್ಟಿಯ ಧಾನ್ಯಸೋಕುವನು ಮುಂತೆ ॥

೧೪೯.ಜಯತು ಭಗವನ್ ಜಯತು ರಘುವೀರ ಎಂದು ।
ಪ್ರಾರ್ಥಿಸುತ ಕೃಷಿಗೈವ ಖುದಿರಾಮನೊಲಿದು ॥

೧೫೦.ಆ ಹೊಲವ ಈಶಾನ್ಯದಂಚಿನಲಿ ಬಿತ್ತಿ ।
ಆದಷ್ಟೆ ಬೆಳೆಯಿಂದ ಪಡೆಯುವನು ತೃಪ್ತಿ ॥

೧೫೧.ಭಕ್ತಿಯಲಿ ಗೈದ ಕೃಷಿಯಿಂ ದೊರೆತ ಭತ್ತ ।
ವರ್ಷವಿಡೀ ಉಣುತಿರ್ದನಾ ರಾಮಭಕ್ತ ॥

೧೫೨.ಖುದಿರಾಮನಾಚಾರ ನಿಷ್ಠೆಯನು ತಿಳಿದು ।
ಒದಗುತಿರ್ದರು ಸಹಾಯಕೆ ಉಳ್ಳ ಜನರು ॥

೧೫೩.ಆದರೂ ಆದಾಯಕಿತ್ತು ನಿರ್ಬಂಧ ।
ಶೋಧಿಸದೆ ಹಣ ಪಡೆಯನೀತ ಜನರಿಂದ ॥

೧೫೪.ಶೂದ್ರ ಪೌರೋಹಿತ್ಯ ವಹಿಸಿದವರಿಂದ ।
ದಕ್ಷಿಣೆಯ ಸ್ವೀಕರಿಸದೇ ಬಾಳುತಿರ್ದ ॥

೧೫೫.ತನ್ನಯ ಕುಲಾಚಾರವರಿತು ಬಾಳುವನು ।
ಸತ್ಯಧರ್ಮದೊಳಚಲ ಶ್ರದ್ಧೆಯಾಂತಿಹನು ॥

೧೫೬.ಅನೃತ ಅನ್ಯಾಯಗಳಿಗವನೊಳಿಂಬಿಲ್ಲ ।
ಅತಿಥಿ ಸತ್ಕಾರದಾಸಕ್ತಿ ಬಿಡಲಿಲ್ಲ ॥

೧೫೭.ನಿತ್ಯಾನ್ನ ನೈವೇದ್ಯ ರಘುವೀರ ಶಿಲೆಗೆ ।
ಸಾಧುಸಂತರ ಸಂತರ್ಪಣೆಯು ಮನೆಯೊಳಗೆ ॥

೧೫೮.ಮುಖ್ಯರಸ್ತೆಯ ಪಕ್ಕದಲ್ಲಿತ್ತು ಮನೆಯು ।
ಸಂನ್ಯಾಸಿ ಅತಿಥಿಗಳಿಗಾಶ್ರಯದ ನೆಲೆಯು ॥

೧೫೯.ಪುರಿಗೆ ಸಾಗುವ ಯಾತ್ರಿಕರಿಗದೆ ಪಥವು ।
ಪಯಣಿಗರಿಗಾ ಮನೆ ವಿರಾಮ ಮಂದಿರವು ॥

೧೬೦.ಬಡವನಾದರು ದಯಾಮಯನು ಖುದಿರಾಮ ।
ಸತ್ಸಂಗ ಸೇವೆಯಲಿ ಸತತ ನಿಸ್ಸೀಮ ॥

೧೬೧.ಆ ಮನೆಗೆ ಹುಲ್ಲು ಹೊದಿಕೆಯದೆ ಛಾವಣಿಯು ।
ಮೂರುಕೋಣೆಗಳಿಹ ಕುಟೀರವೆನಬಹುದು ॥

೧೬೨.ಭತ್ತವನು ಸಂಗ್ರಹಿಸಿ ಕುಟ್ಟಿ ಬಳಸಲ್ಕೆ ।
ಇತ್ತೊಂದು ಕೋಣೆಯದಕಾಗಿಯೇ ಬಳಕೆ ॥

೧೬೩.ಉಳಿದೆರಡು ಕೋಣೆಯಲಿ ಊಟ ವಿಶ್ರಾಂತಿ ।
ಸ್ಥಳವಿಲ್ಲವಾದರೂ ನೆಲೆಸಿಹುದು ಶಾಂತಿ ॥

೧೬೪.ದೂರದಿಂದಲಿ ನೋಡಿ ತಿಳಿಯಬಹುದಿತ್ತು ।
ಬಡತನದ ಬಗೆಯ ಮನೆಯೇ ಹೇಳುತ್ತಿತ್ತು ॥

೧೬೫.ಆದರೂ ಕಂಡವರ ಮನ ಸೆಳೆಯುತ್ತಿತ್ತು ।
ಸುತ್ತಲೂ ಮರಬಳ್ಳಿಗಳ ಸೊಬಗು ಇತ್ತು ॥

೧೬೬.ಋಷ್ಯಾಶ್ರಮದ ತೆರದಿ ಶೋಭಿಸುತಲಿತ್ತು ।
ಶಾಂತಿಧಾಮವ ಪೋಲ್ವ ತಾಣವಾಗಿತ್ತು ॥

೧೬೭.ಶುದ್ಧ ಸಾತ್ವಿಕ ಭಾವ ಜಾಗೃತಿಯ ನೆಲೆಯು ।
ಪುಣ್ಯಪ್ರಭಾವದುದ್ದೀಪನದ ಸೆಲೆಯು ॥

೧೬೮.ಅತಿಥಿಗಳ ಹಸಿವು ನೀರಡಿಕೆಗಳ ಗ್ರಹಿಸಿ ।
ಸತತ ಸೇವಾಭಾವದಿಂದವರ ತಣಿಸಿ ॥

೧೬೯.ಉಪಚರಿಸುತಿರುವ ಸತಿಪತಿಗಳ ನಿವಾಸ ।
ಪಯಣಿಗರಿಗೆಲ್ಲರಿಗು ಸ್ವಾಗತಕ್ಷೇತ್ರ ॥

೧೭೦.ಖುದಿರಾಮ ನಿತ್ಯಸಂತರ್ಪಣೆಯ ಗೈವ ।
ನಿಧಿದವಸಧಾನ್ಯಂಗಳಿರದ ಕಡುಬಡವ ॥

೧೭೧ ಈ ಶಂಕೆಯಿಂದ ಹಲವರು ಯೋಚಿಸುವರು ।
ಈಶ್ವರೇಚ್ಛೆಯನಳೆದು ತಿಳಿವರದಾರು ॥

೧೭೨.ಭಗವಂತ ಮಗುವಾಗಿ ಜನಿಸಿದಾ ಮನೆಗೆ ।
ನಗುತ ಸಿರಿದೇವಿ ಹರಸಳೆ ನಿರ್ವಹಣೆಗೆ ॥

೧೭೩.ದೇವತೆಗಳಲ್ಲಿ ಪರಿಚರ್ಯೆ ಕಾಣೆವರು ।
ಕೋಶಾಧಿಕಾರದಿ ಕುಬೇರನಿಹ ಒಲಿದು ॥

೧೭೪.ಭಗವಂತನೇ ಬಾಲರೂಪದಲಿ ಬಂದು ।
ಬಗೆಬಗೆಯ ಲೀಲೆಗಳ ತೋರುತಿಹನೆಂದು ॥

೧೭೫.ಅರಿಯದೇ ಬೆಳೆಸುತಿರೆ ತಂದೆ ತಾಯಿಗಳು ।
ನೆರೆಹೊರೆಯ ಜನರು ಸಂತಸವ ಪಡುತಿರಲು ॥

೧೭೬.ಮಗುವ ಮಡಿಲೊಳಗಿರಿಸಿ ಕುಳಿತಿರಲು ಅಜ್ಜಿ ।
ಹಗಲೊಡೆಯನಾ ಕಿರಣ ಸೋಂಕಿದುದು ಅಲ್ಲಿ ॥